(ಗೊಂದಲ)

SRI R. V. DESHPANDE.—I have got highest regard for Mr. Basavalingappa. He is a senior Member of this House. I am holding this portfolio. ಬಿಲ್ ಬಗ್ಗೆ ನಮಗೆ ಇಂಟರೆಸ್ಟ್ ಇಲ್ಲ ಎಂದು ಅವರು ಹೇಳುತ್ತಿದ್ದಾರೆ. What is this ? This bill is being introduced for the entire State.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾವು ಯಾರೂ ಏನೂ ಮಾತನಾಡಲಿಲ್ಲ. ಬಂಗಾರಪ್ಪನವರು ಈ ಬಿಲ್ ಬಗ್ಗೆ ಹೇಳುತ್ತಿದ್ದರು. ಖರ್ಗೆಯವರು ಸಹ ಹೇಳುತ್ತಿದ್ದರು ಬೇರೆಯವರು ಇದರ ಬಗ್ಗೆ ಮಾತನಾಡಬಾರದು ಎಂದು ಹೇಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಬಿಲ್ ಬಹಳ ಮುಖ್ಯ. ನನ್ನ ಅನುಭವ ಆಧಾರದ ಮೇಲೆ ಇದು ಬಹಳ ಮುಖ್ಯ ಆದಷ್ಟು ಜಾಗ್ರತೆ ಈ ಬಿಲ್ ಅನ್ನು ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು. ಇದನ್ನು ಚರ್ಚೆಗೆ ತೆಗೆದು ಕೊಳ್ಳುವುದೇ ಇಲ್ಲ ಎಂದರೆ ಹೇಗೆ ? ಬೆಂಗಳೂರು ನಗರದ ಸೌಂದರ್ಯದ ದೃಷ್ಟಿಯಿಂದ ಈ ತಿದ್ದುಪಡಿ ಬಂದರೆ ಒಳ್ಳೆಯದು. ಈಗ ಏನು ಒಪಿಡಿ. ಸಿಪಿಡಿ ನಡೆಯುತ್ತಿದೆ. ಅದನ್ನು ಈ ತಿದ್ದುಪಡಿ ಮೂಲಕ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕಾಗುತ್ತದೆ. ಈ ಬಿಲ್ ಬಗ್ಗೆ ಚರ್ಚೆ ನಡೆಯಲಿ, ಚರ್ಚೆನಡೆಯದೇ ಇದ್ದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಈಗ ಈ ಬಿಲ್ ಮುಂದೆ ಹೋಗಿದೆ. ಆದರೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಬಂಗಾರಪ್ಪನವರೇ ಮಾತನಾಡುವುದು ಬೇಡ ಎಂದು ಹೇಳಿದರು ಎನ್ನುವ ರೀತಿ ಹೇಳಿದ್ದಾರೆ. ಆದರೆ ನಾನು ಮಾತನಾಡುವುದು ಬೇಡ ಎಂದು ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹಾಗೆ ಹೇಳಲಿಲ್ಲ. ನೀವೇ ಮಾತನಾಡಿದಿರಿ, ನಾನು ಮಾತನಾಡಲು ಆಗಲಿಲ್ಲ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ನೀವು ಮಾತನಾಡುವುದು ಬೇಡ ಎನ್ನುವ ಅಭಿಪ್ರಾಯದಲ್ಲಿ ನಾನು ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ದೇಶಪಾಂಡೆ ಹಾಗೂ ಬಸವಲಿಂಗಪ್ಪನವರ ಮಧ್ಯೆ ಈಗ ಏನು ಮಾತುಕತೆಗಳು ಆದವು. ಅವನ್ನು ದಯವಿಟ್ಟು ಎಕ್ಸ್‌ಪಂಜ್ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು, ಅವನ್ನು ಎಕ್ಸ್‌ಪಂಜ್ ಮಾಡುತ್ತೇನೆ. I will expung both.

Statement by the Minister

Reg: Election 15 R. M. C.

ಪ್ರೊ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಆರ್. ಎಂ. ಸಿ. ಚುನಾವಣೆ ಬಗ್ಗೆ ಸರ್ಕಾರದ ನೋಟಿಫಿಕೇಷನ್ ಆಗಿದೆ. ಅದನ್ನು ಸದನದ ಟೇಬಲ್ ಮೇಲೆ ಇಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದನ್ನು ಓದಿ.

ಪ್ರೊ ಎ. ಲಕ್ಷ್ಮೀಸಾಗರ್.—ಅಧಿಸೂಚನೆ ಈ ರೀತಿ ಇದೆ.

"ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ, ೧೯೬೬ರ ಪ್ರಕರಣ ೧೩ರ ಉಪಕರಣ(೪)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ೧೯೮೯ರ ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ೧೦ನೇ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಚುನಾವಣೆಗಳನ್ನು ನಡೆಸಬೇಕೆಂದು ಹೊರಡಿಸಿದ ಸರ್ಕಾರಿ ಪತ್ರ ಸಂಖ್ಯೆ : ಸಮಾತೂ/೧೫೫/ಮಾನಿಗ/೮೮(ಭಾಗ-೨) ದಿನಾಂಕ ೧೮-೧೦-೧೯೮೮ರ ಆದೇಶವನ್ನು ರಾಜಕಾರಿಂದ ಮತ್ತು ಸಾರ್ವಜನಿಕರಿಂದ ಬಂದಿರುವ ಮನವಿಗಳನ್ನು

ಪರಿಗಣಿಸಿ ಹಿಂತೆಗೆದುಕೊಳ್ಳಲಾಗಿದೆ. ಎಲ್ಲಾ ಜಿಲ್ಲಾಧಿಕಾರಿಗಳು ಈಗಾಗಲೇ ಘೋಷಿಸಿರುವ ಚುನಾವಣಾ ಪೇಳಾಪಟ್ಟಿಗಳನ್ನು ಹಾಗೂ ಅವುಗಳನ್ವಯ ತೆಗೆದು ಕೊಂಡಿರುವ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ."

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ನಜೀರ್ ಅವಾಜ್ ಯೋಜನೆ

೨೦೫ (೭೭೬) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ಸರ್ಕಾರ ನಜೀರ್ ಅವಾಜ್ ಯೋಜನೆಯನ್ನು ಯಾವಾಗ ಜಾರಿಗೆ ತಂದಿತು ಮತ್ತು ಇದುವರೆವಿಗೂ ಒದಗಿಸಿರುವ ಹಣ ಎಷ್ಟು ?

ಆ) ಪ್ರತಿಯೊಂದು ಜಿಲ್ಲಾಗೂ ಮಂಜೂರು ಮಾಡಿರುವ ಮನೆಗಳು ಎಷ್ಟು ? ಮತ್ತು ಜಿಲ್ಲಾವಾರು ವಾಸ್ತವಿಕವಾಗಿ ಬಿಡುಗಡೆ ಮಾಡಿರುವ ಹಣ ಮತ್ತು ದಿನಾಂಕ

ಇ) ವೆಚ್ಚ ಮಾಡಿರುವ ಹಣ ಮತ್ತು ಜನವರಿ ೮೯ರ ಅಂತ್ಯದಲ್ಲಿ ಪೂರ್ಣಗೊಳಿಸಿದ ಮನೆಗಳ ಸಂಖ್ಯೆ?

ಈ) ಜಿಲ್ಲಾವಾರು ಅಪೂರ್ಣಗೊಂಡ ಮನೆಗಳ ಸಂಖ್ಯೆ ಮತ್ತು ಪೂರ್ಣಗೊಳಿಸ ಫಲಾನುಭವಿಗಳಿಗೆ ಹಸ್ತಾಂತರಿಸಲು ಬೇಕಾಗುವ ಹಣ

ಉ) ಯಾವಾಗ ಮನೆಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

ಅ) ೧೯೮೮-೮೯ನೇ ಸಾಲಿನಲ್ಲಿ ೧೧೪೫ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ತಃಖ್ತೆ 1 ಲಗತ್ತಿಸಿದೆ.

ಇ) ತಃಖ್ತೆ 11 ಲಗತ್ತಿಸಿದೆ.

ಈ) ತಃಖ್ತೆ 2 ರಂತೆ.

ಉ) ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಮನೆಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸುವ ಯೋಜನೆ ಇದೆ.